ಆರ್.ಸಿ. ಪರಶುರಾಮ್, ಶಿಕಾರಿಪುರ

*ನಾಣ್ಯ ಬಿದ್ದ ಸದ್ದಾದ ತಕ್ಷಣ ಅದು ನಮ್ಮದಲ್ಲದಿದ್ದರೂ ತಿರುಗಿ ನೋಡುವುದೇಕೆ?*



ಕಾಂಚಾಣ ಕುರುಡಾದ್ದರಿಂದ ಅದನ್ನು ಕೈಹಿಡಿದು ಸರಿಯಾದ ಸ್ಥಳಕ್ಕೆ ತಲುಪಿಸಲು.

ಕುಮಾರ ಚಲವಾದಿ, ಹೊಳೆನರಸಿಪುರ

*ಹಿಂದಿನ ಕಾಲದಲ್ಲಿ ರಾಜರು ಕೆರೆ, ಕಟ್ಟೆಗಳನ್ನು ಕಟ್ಟಿಸಿ ಕೃಷಿಗೆ ಸಹಾಯ ಮಾಡುತ್ತಿದ್ದರು. ಆದರೆ ಈಗ?*

ಕೆರೆ, ಕಟ್ಟೆಗಳನ್ನು ಡೀನೋಟಿಫೈ ಮಾಡಿ ಕೆಡಿಸಿ ಖುಷಿಗೆ ವಿಹಾರ ಮಾಡುತ್ತಾರೆ.

ಆರ್. ನಾಗರಾಜ್, ಗೊರೂರು

*ಮಧ್ಯರಾತ್ರಿಯಲ್ಲೂ ಸದ್ದಿಲ್ಲದೆ ಬಿಕ್ಕೋ ಅವಳ ಮನದಲ್ಲಿ ಏನಿರತ್ತೆ?*

ಸುಂದರ ಸ್ವಪ್ನಗಳ ಅವಶೇಷ.

ಟಿ.ಎಂ.ಮಾನಪ್ಪ, ಶಿವಮೊಗ್ಗ

*ಈಗಿನ ಅತ್ತೆ ಸೊಸೆಯರ ಸಂಬಂಧದ ಬಗ್ಗೆ ಏನಂತೀರಿ?*



ಅವರವರೇ ಒಬ್ಬರನ್ನೊಬ್ಬರು ಸಾಕಷ್ಟು ಅಂದುಕೊಳ್ಳುವಾಗ ನಾನು ಅನ್ನಲಾದರೂ ಏನು ಉಳಿದಿದ್ದೀತು ಬಿಡಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಮನ ಲೆಕ್ಕ, ಕೃಷ್ಣನ ಲೆಕ್ಕಗಳಲ್ಲಿ ನಿಮಗೆ ಯಾವುದು ಹೆಚ್ಚು ಪ್ರಿಯ ರಾಮ್?*

ರಾಮನಾಮ ಚೆಕ್ಕು ಡ್ರಾಫ್ಟ್ ಜೊತೆ ಕೃಷ್ಣನಾಮ ಕ್ಯಾಶ್ ಇರಲ್ ಅಕೌಂಟು ಪರ್ಫೆಕ್ಟೆಂದ ಮರ್ಮಜ್ಞ.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ನೋಡಿ ತಿಳಿದುಕೊಳ್ಳುವುದಕ್ಕೂ, ಮಾಡಿ ತಿಳಿದುಕೊಳ್ಳುವುದಕ್ಕೂ, ಅನುಭವಿಸಿ ತಿಳಿದುಕೊಳ್ಳುವುದಕ್ಕೂ ವ್ಯತ್ಯಾಸ?*

ನೋಡಿ ತಿಳಿದುಕೊಳ್ಳುವುದು ವಿಚಾರ, ಮಾಡಿ ತಿಳಿದುಕೊಳ್ಳುವುದು ಆಚಾರ, ಅನುಭವಿಸಿ ತಿಳಿದುಕೊಳ್ಳುವುದು ಗ್ರಹಚಾರ!

ಎಂ.ಜಿ. ಚನ್ನಪ್ಪಸ್ವಾಮಿ. ಭದ್ರಾವತಿ

*ಪ್ರೇಮಿಗಳೆಲ್ಲಾ ಏಕಾಂತ ಬಯಸಲು ಕಾರಣ?*

ಸುದ್ದಿಹದ್ದುಗಳಿಗೆ ಸಿಕ್ಕಿ ದುಃಖಾಂತವಾಗದಿರಲು!

ಎಂ.ಎನ್. ಸೋಮಶೇಖರ್, ಮೈಸೂರು

*ಶ್ರೀಕೃಷ್ಣಪರಮಾತ್ಮನು 'ನಾರೀ ಹೃದಯಂ ನ ಪಶ್ಯತಿ' ಎಂದು ಏಕೆ ಹೇಳಿದನು?*

ಆಗಿನ ಕಾಲದಲ್ಲಿ ಹೆಣ್ಣು ಕಾರ್ಡಿಯಾಲಜಿಸ್ಟ್‌ಗಳು ಇರಲಿಲ್ಲವಂತೆ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಮಧುರಾಧರದ ಸವಿ ಸವಿಯುವ ಮುನ್ನ ದಂತ ಭಗ್ನವಾಯಿತಲ್ಲ?*

ನಿಮ್ಮದೇ ತಪ್ಪು. ತುಟಿಗೆ ಹಚ್ಚಿದ್ದ ಲಿಪ್‌ಸ್ಟಿಕ್‌ನ ಕೆಂಪು ಬಣ್ಣ ಅಪಾಯದ ಸಂಕೇತವೆಂದು ಅರಿಯಬೇಕಿತ್ತು.

ಡೈರಿ ವಿಶ್ವನಾಥ್, ಬೆಂಗಳೂರು

*ನಿಮ್ಮ ಭವಿಷ್ಯ ಹೇಗಿದೆ?*

ಕನ್ನಡದ ಸಾಹಿತಿಯ ಭವಿಷ್ಯ ಇರುವುದು ಒಂದೇ ರೀತಿ – ಭೂತದಂತೆ.

ಪ್ರಹ್ಲಾದರಾಜು ಬುರ್ಲಿ, ದಾವಣಗೆರೆ

*ಇದ್ದಕ್ಕಿದ್ದಂತೆ ಸಮುದ್ರದ ನೀರೆಲ್ಲಾ ಸಿಹಿನೀರಾಗಿಬಿಟ್ಟರೆ?*

'ರುಚಿಗೆ ತಕ್ಕಷ್ಟು ಉಪ್ಪು' ಸಹ ದೊರೆಯದೆ ಜಗತ್ತೇ ರುಚಿಹೀನವಾಗಿಬಿಡುತ್ತದೆ!

ಶಂಕರೇಗೌಡ, ಮಂಡ್ಯ

*ಅಭಿವೃದ್ಧಿ ಹೊಂದಿದಾಗ ಹತ್ತಿರದವರೇ ಹೆಚ್ಚು ಕರುಬಲು ಕಾರಣ?*

ಮಜ್ಜಿಗೆ–ಬೆಣ್ಣೆ ನಿಯಮ! ಕಡೆಯಲ್ಪಟ್ಟ ಮಜ್ಜಿಗೆ ಬೆಣ್ಣೆಯಾಗುತ್ತದೆ, ಹಿಂದುಳಿದ ಮಜ್ಜಿಗೆ ಹುಳಿಯಾಗುತ್ತದೆ!

ಬಿ. ಚಂದ್ರೇಗೌಡ, ಬೆಂಗಳೂರು

*ಅಪ್ರಿಯವಾದ ಸತ್ಯವನ್ನು ಹೇಳಬಾರದು ಅಂತಾರಲ್ಲಾ, ಯಾಕೆ?*

ದವಡೆಹಲ್ಲಿನ ಬಗ್ಗೆ ಕಾಳಜಿ!

## ಬಹುಮಾನಿತ ಪ್ರಶ್ನೆ

ಜಾಕಬ್ ಡಿಸೋಜ, ಕುರುವಳ್ಳಿ

*ದೇವಸ್ಥಾನಕ್ಕೆ ಹೋಗಿ ಬೇರೊಬ್ಬರ ಚಪ್ಪಲಿ ಹಾಕಿಕೊಂಡು ಬರುವವರಿಗೆ ದೇವರು ಏನು ವರ ಕೊಡುತ್ತಾನೆ?*

ಶತಪಾದುಕಾ ಪ್ರಾಪ್ತಿರಸ್ತು; ಅಪಿ ಚ ಕ್ವಚಿತ್ ಪಾದುಕಾಪ್ರಹಾರಪ್ರಾಪ್ತಿರಸ್ತು.

ಕಡಬ ಶ್ರೀವತ್ಸ, ಬೆಂಗಳೂರು

*ರಾಂಜೀ, ದೇವರಾದರೂ ನಮ್ಮ ಪ್ರಶ್ನೆಗೆ ಉತ್ತರಕೊಡಬಹುದು. ಆದರೆ ತಮ್ಮ ಉತ್ತರ ಆಯ್ದ ಓದುಗಭಕ್ತರಿಗೆ ಮಾತ್ರ ಸೀಮಿತವೇ?*

ದೇವನಿಗೆ ಇಡೀ ಜಗದ ಅಂಗಣವಿದೆ. ನನಗೆ ಇಪ್ಪತ್ತೇ ಪ್ರಶ್ನೆಗಳ ಅಂಕಣ. ಹೆಚ್ಚು ಕೇಳಿದವರಿಗೆ ಹೆಚ್ಚು ಉತ್ತರವಷ್ಟೆ!

ರಮೇಶ. ಜ. ಬೊಂಗಾಳೆ, ಬೈಲಹೊಂಗಲ

*ಮಂಗನಿಂದ ಮಾನವ. ಮುಂದೇನು ಸಾರ್?*

ಮಾವನ ಮಗಳಿಂದ ಮಂಗ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

ಪ್ರೀತಿ ಸಿಮ್ ಕಾರ್ಡ್; ಮದುವೆ ಮೊಬೈಲ್. ಸಂಸಾರ?



ಹೆಂಡತಿಯಿಂದ ನಿರಂತರವಾಗಿ ಹೊರಡುವ ಏಕೈಕ ಪ್ರಶ್ನೆ – what's up?

ಮುಕುಂದ ಹೆರಕಲ್ಲ, ಗುಲಬರ್ಗಾ

*ದಿವಂಗತ ಖ್ಯಾತನಾಮರೊಬ್ಬರು ಪ್ರತ್ಯಕ್ಷವಾಗಿ ನಿಮ್ಮನ್ನು ಪಾನಗೋಷ್ಠಿಗೆ ಕರೆದರೆ ಯಾರ ಆಹ್ವಾನವನ್ನು ಸ್ವೀಕರಿಸುತ್ತೀರಿ?*

ಮಾಸ್ತಿಯವರದು; ಚೆಂಬುಗಟ್ಟಲೆ ರುಚಿಕಟ್ಟಾದ ಗಸಗಸೆ ಪಾಯಸ ಸವಿಯಲು!

ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ

*ಭೀಮನ ಅಮಾವಾಸ್ಯೆಯಂದು ಗಂಡನ ಪೂಜೆ ಮಾಡಲೇಬೇಕಾ ಸಾರ್?*

ನೀವು ದಿನವೂ 'ಸರ್ರಿಯಾಗಿ ಪೂಜೆ' ಮಾಡುತ್ತಿದ್ದರೆ ಒಂದು ದಿನ ಮಾಡದಿದ್ದರೆ ಪರವಾಯಿಲ್ಲ ಬಿಡಿ.

■ ರಾಮ್